ಕರ್ನಾಟಕ ಸರ್ಕಾರ
ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ
Hyderabad Karnataka Region Development Board Kalaburagi

ಸಂ:ಹೈಕಪ್ರಅಮಂ/ಸಿಬ್ಬಂದಿ/66/2018–19 ದಿನಾಂಕ:19/03/2019

: : ಸುತ್ತೋಲೆ–3 : :

ವಿಷಯ: ಹೈ.ಕ.ಪ್ರ.ಅ.ಮಂಡಳಿಯ HYKA SOFT ಸಾಫ್ಟವೇರ್‌ನಲ್ಲಿ ಅನುಷ್ಠಾನಾಧಿಕಾರಿಯವರು (ಆನ್‌ಲೈನ್) ಕಾಮಗಾರಿವಾರು ಹಣ ಸಂದಾಯ ವ್ಯವಸ್ಥೆಯನ್ನು ಕ್ರಮಬದ್ಧಗೊಳಿಸುವ ಕುರಿತು.

ಉಲ್ಲೇಖ:
1. ಮಂಡಳಿಯ ಪತ್ರ ಸಂ:ಹೈಕಪ್ರಮಂ/ಆಡಳಿತ/ಸಿಬ್ಬಂದಿ/05/18–19,ದಿ:20.12.2018
2. ಮಂಡಳಿಯ ಪತ್ರ ಸಂ: ಹೈಕಪ್ರಅಮಂ/ಯೋಶಾ/ಸುತ್ತೋಲೆ/19/2018–19, ದಿನಾಂಕ: 0.03/01/2019 ಹಾಗೂ 08/03/2019
3. ಮಂಡಳಿಯ ಸುತ್ತೋಲೆ–2 ಸಂ:ಹೈಕಪ್ರಮಂ:ಸಿಬ್ಬಂದಿ:66:18–19,ದಿ:15.3.2019
4. ಮಂಡಳಿಯ ಸುತ್ತೋಲೆ–1 ಸಂ:ಹೈಕಪ್ರಮಂ:ಸಿಬ್ಬಂದಿ:66:18–19,ದಿ:2.3.2019
5. ಮಂಡಳಿಯ ಆದೇಶ ಸಂ: ಹೈಕಪ್ರಮಂ:ಸಿಬ್ಬಂದಿ:23:17–:18–19,ದಿ:1.3.2019

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುಷ್ಠಾನಾಧಿಕಾರಿಯವರಿಗೆ ಕಾಮಗಾರಿವಾರು ಹಣ ಸಂದಾಯ ಬೇಡಿಕೆಯ (RTGS) ಪ್ರಸ್ತಾವನೆಗಳನ್ನು ಆನ್‌ಲೈನ್‌ನಲ್ಲಿ ಅಳವಡಿಲಾಗುತ್ತಿದ್ದರೂ ಅವರಿಂದ ನೈಜಪ್ರತಿ (ಹಾರ್ಡಕಾಪಿ) ಸ್ವೀಕೃತವಾದನಂತರ ಮಂಡಿಸುವದರಿಂದ ಸಮಯ ವ್ಯಯವಾಗುವುದನ್ನು ಮನಗೊಂಡು, ಭಾಗಶಃ ಅನುದಾನದ RA–1, RA–2 ಪ್ರಸ್ತಾವನೆಯನ್ನು, ಆನ್‌ಲೈನ್ ಮೂಲಕವೇ ಅಂಗೀಕರಿಸಲು ಕ್ರಮ ಜರುಗಿಸಲಾಗಿರುತ್ತದೆ.

ಉಲ್ಲೇಖ–1ರ ಪತ್ರದನ್ವಯ ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅನುಷ್ಠಾನಾಧಿಕಾರಿಯವರಿಗೆ ಪೂರ್ಣಗೊಂಡಿರುವ ಕಾಮಗಾರಿಯ ಹಣ ಸಂದಾಯ ಬೇಡಿಕೆಯ ಪ್ರಸ್ತಾವನೆಗಳನ್ನು ಸಮಗ್ರ ಪರಿಶೀಲನೆ ನಡೆಯಿಸಿ, ಬಿಲ್ ಪಾವತಿಗೆ ಜಿಲ್ಲಾಧಿಕಾರಿ/ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಂದ ಧೃಡಿಕರಿಸಿ, ಆನ್‌ಲೈನ್‌ನಲ್ಲಿ ಸಲ್ಲಿಸುವಾಗ ಅಳವಡಿಸಲು ಹಾಗೂ ಹಾರ್ಡ ಕಾಪಿ ಸಲ್ಲಿಸಲು ನಿದೇಶಿಸಲಾಗಿತ್ತು.

ಉಲ್ಲೇಖ (2) ರ ಪತ್ರಗಳನ್ವಯ ಅನುಷ್ಠಾನಾಧಿಕಾರಿಗಳು ಭಾಗಶ: ಪ್ರಸ್ತಾವನೆಗಳಲ್ಲಿ ಕಾಮಗಾರಿಯ ಅನುದಾನದ ಶೇ90–95 ರಷ್ಟು ಹಣ ಪಾವತಿಗೆ ಕೋರುತ್ತಿರುವುದರಿಂದ, ಭಾಗಶ: ಹಾಗೂ ಅಂತಿಮ ಹಣ ಸಂದಾಯ ಬೇಡಿಕೆಯ ಪ್ರಸ್ತಾವನೆಗೆ ರೂಪರೇಷಗಳನ್ನು ರಚಿಸಿಲಾಗಿದ್ದು, ಅದರಂತೆ ಅನುಷ್ಠಾನಾಧಿಕಾರಿಯವರು ಕಾಮಗಾರಿ ಪೂರ್ಣಗೊಂಡ ದಾಖಲಾತಿಗಳ ಧೃಢೀಕರಣ, ಹಸ್ತಾಂತರ ಪತ್ರ, ಮೂರನೇಯ ಪರಿವೀಕ್ಷಣಾ ತಂಡದ ವರದಿ, ಚೆಕ್‌ಲಿಸ್ಟ್ ಹಾಗೂ ಜಿಲ್ಲಾಧಿಕಾರಿಗಳು/ಜಿ.ಪಂ.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲರುಜುವಿನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ಜರುಗಿಸಲಾಗಿದೆ.

ತದನಂತರ, ಉಲ್ಲೇಖ –3 ರನ್ವಯ ಅಂತಿಮ ಕಂತಿನ ಬಿಡುಗಡೆಯನ್ನು ಸಹ ಸಾಫ್ಟಕಾಪಿ ಆಧರಿಸಿ, ಇತ್ಯರ್ಥಗೊಳಿಸಲು ಕ್ರಮಜರುಗಿಸಲಾಗಿರುತ್ತದೆ.

ಆದರೆ, ಅನುಷ್ಠಾನಾಧಿಕಾರಿಯವರು ಕಾಮಗಾರಿಯ ಹಣ ಪಾವತಿಯ ಭಾಗಶಃ ಹಾಗೂ ಪೂರ್ಣ ಪ್ರಮಾಣದ ಅನುದಾನ ಸಂದಾಯದ ಪ್ರಸ್ತಾವನೆಗಳನ್ನು ಉಲ್ಲೇಖ (4)ರಲ್ಲಿ ನಿರ್ದಿಷ್ಠಪಡಿಸಿರುವ ದಾಖಲಾತಿಗಳೊಂದಿಗೆ ಸಾಫ್ಟವೇರ್‌ನಲ್ಲಿ ಅನುಷ್ಠಾನ ಇಲಾಖಾ ಕಛೇರಿಯ ಕೋರಿಕೆ ಪತ್ರವಿರದೆ ಆನ್‌ಲೈನ್‌ನಲ್ಲಿ ಅಳವಡಿಸುತ್ತಿರುವರು. ಆನ್‌ಲೈನ್ ತಾಂತ್ರಿಕ ತೊಡಕುಂಟಾದಾಗ ಪರ್ಯಾಯ ವ್ಯವಸ್ಥೆಯಾಗಿ ದಾಖಲಾತಿಗಳನ್ನು ಸಮಾಯಾಚಾರನುಸಾರ ಸಂಗ್ರಹಿಸಬೇಕಾಗಿರುತ್ತದೆ ಹಾಗೂ ಆನ್‌ಲೈನ್ ಪ್ರಸ್ತಾವನೆಗಳನ್ನು ಕಛೇರಿಯ ಆವಕ ವಹಿವಾಟಿನಲ್ಲಿ ದಾಖಲೀಕರಣಗೊಳಿಸುವುದು ಅಗತ್ಯವಿದೆ.

ಆ ಪ್ರಯುಕ್ತ, ಮೇಲಿನ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಆನ್‌ಲೈನ್ ಸ್ವೀಕೃತ ಹಣ ಪಾವತಿಸಲು ಪ್ರಸ್ತಾವನೆಯನ್ನು ಪತ್ರ ವಹಿವಾಟು ರೂಪದಲ್ಲಿ ದಾಖಲೀಕರಣಗೊಳಿಸುವುದು ಹಾಗೂ ಕಡತ ವ್ಯವಹಾರದ ವ್ಯವಸ್ಥೆಯನ್ನು ಈ ಕೆಳಕಂಡಂತೆ ಕ್ರಮಬದ್ಧಗೊಳಿಸಿದೆ.

1. **ಅನುಷ್ಠಾನಾಧಿಕಾರಿಯವರು ಆನ್‌ಲೈನ್‌ನಲ್ಲಿ ಕಾಮಗಾರಿವಾರು ಹಣ ಪಾವತಿ ಪ್ರಸ್ತಾವನೆಯನ್ನು ಸಲ್ಲಿಸುವಾಗ ಕಡ್ಡಾಯವಾಗಿ ಕಾರ್ಯದರ್ಶಿಗಳು, ಹೈ.ಕ.ಪ್ರ.ಅ.ಮಂಡಳಿ,** ಕಲಬುರಗಿ ಇವರಿಗೆ ವಿಳಾಸವಿರುವ ಕೋರಿಕೆ ಪತ್ರದೊಂದಿಗೆ **(Covering Letter) ಸಲ್ಲಿಸುವುದು. ಈ ಕ್ರಮವನ್ನು** 01.04.2019 ರಿಂದ ಅನುಷ್ಠಾನಗೊಳಿಸುದು.

   (ಕ್ರಮ: ಲೆಕ್ಕಶಾಖೆ, ಆಡಳಿತ ಶಾಖೆ)

2.
   a. ಮಂಡಳಿಯ ಸುತ್ತೋಲೆ –2 ಸಂ:ಹೈಕಪ್ರಮಂ:ಸಿಬ್ಬಂದಿ:66:2018–19, ದಿ:15.3.2019 ರನ್ವಯ ತಿಳಿಸಿರುವಂತೆ ಭಾಗಶಃ ಹಾಗೂ ಅಂತಿಮ ಬಿಲ್ ಪ್ರಸ್ತಾವನೆಗಳ ಸಾಫ್ಟಕಾಪಿಯನ್ನು ಪರಿಗಣಿಸಿ, ಅನುಷ್ಠಾನಾಧಿಕಾರಿಯವರಿಂದ ಕಛೇರಿಯ ಪತ್ರದೊಂದಿಗೆ ಆನ್‌ಲೈನ್‌ನಲ್ಲಿ ಸ್ವೀಕೃತವಾದ ಪ್ರಸ್ತಾವನೆಯನ್ನು ಲೆಕ್ಕ ಶಾಖೆಯ ಸಂಬಂಧಪಟ್ಟ ಆಪರೇಟರ್‌ಗಳು, ಅದೇ ದಿನಾಂಕದಂದು Dowload ಮಾಡಿ, ಕಲರ್ ಪ್ರಿಂಟ್ ತೆಗೆದು, ಕಛೇರಿಯ ಆವಕ ಶಾಖೆಗೆ ಕಳುಹಿಸುವುದು

      (ಕ್ರಮ: ಲೆಕ್ಕಶಾಖೆ)

   b. ಆವಕ ಶಾಖೆಯವರು ಪ್ರಸ್ತಾವನೆಗಳನ್ನು ವಹಿವಾಟು ವಹಿಯಲ್ಲಿ ನೊಂದಾಯಿಸಿ, ಆವಕ ಶಾಖೆಯಿಂದ ತಕ್ಷಣವೇ ಲೆಕ್ಕ ಶಾಖೆಯ ವಿಷಯ ನಿರ್ವಾಹಕರಿಗೆ ತಲುಪಿಸುವುದು.

      (ಕ್ರಮ: ಆವಕ ಶಾಖೆ, ಆಡಳಿತ ವಿಭಾಗ)

3. ಲೆಕ್ಕ ಶಾಖೆಯ ಜಿಲ್ಲಾವಾರು ವಿಷಯ ನಿರ್ವಾಹಕರು ಆವಕ ಶಾಖೆಯಿಂದ ಸ್ವೀಕೃತ ಪ್ರಸ್ತಾವನೆಯನ್ನು ಈ ಕೆಳಗಿನಂತೆ ಮಂಡಿಸುವುದು.

   **a.** ಪ್ರಸ್ತಾವನೆಯೂ ಭಾಗಶಃ ಅನುದಾನದ RA-1, RA-2 ಗಳದ್ದಾಗಿದ್ದರೇ ಮಂಡಳಿಯ ಪತ್ರ ಸಂ: ಹೈಕಪ್ರಅಮಂ/ಆಡಳಿತ ಸಿಬ್ಬಂದಿ/ 05/ 2018-19, ದಿನಾಂಕ: 20/12/2018ರನ್ವಯ, ನೀಡಲಾಗಿರುವ ನಿರ್ದೇಶನಗಳಂತೆ ಇಂಡೆಂಟನ್ನು ಪರಿಶೀಲಿಸಿ, ಹಣ ಸಂದಾಯಕ್ಕೆ ಅನುದಾನದ ಆಡಳಿತ ಅನುಮೋದನೆಗೆ ಒಳಪಡಿಸಲು ಆಡಳಿತ ಶಾಖೆಗೆ ಸಲ್ಲಿಸಿ, ಆಡಳಿತ ಅನುಮೋದನೆಯನ್ನು ಪಡೆದು, ಚೆಕ್ ಮೂಲಕ ಅನುಷ್ಠಾನಾಧಿಕಾರಿಗಳಿಗೆ ಸಂದಾಯಕ್ಕೆ ಕ್ರಮ ಜರುಗಿಸುವುದು.

      (ಕ್ರಮ: ಲೆಕ್ಕಶಾಖೆ, ಆಡಳಿತ ಶಾಖೆ)

   b. ಪ್ರಸ್ತಾವನೆಯೂ ಅಂತಿಮ ಬಿಲ್ ಅನುದಾನದ ಪ್ರಸ್ತಾವನೆಯಾದಲ್ಲಿ, ಪಸ್ತಾವನೆಯನ್ನು ನೇರವಾಗಿ ಯೋಜನಾ ಶಾಖೆಗೆ ಕಳುಹಿಸುವುದು. ಆ ಪ್ರಸ್ತಾವನೆಯನ್ನು ಯೋಜನಾ ಶಾಖೆಯಿಂದ ಮಂಡಳಿಯ ಉಲ್ಲೇಖ (1)ರ ಪತ್ರದನ್ವಯ, ತಿಳಿಸಿರುವಂತೆ ಸಂಪೂರ್ಣ ದಾಖಲಾತಿಗಳನ್ನು ಇಂಡೆಂಟ್‌ದೊಂದಿಗಿರುವುದನ್ನು ಹಾಗೂ ಮಂಡಳಿಯಿಂದ ಗೊತ್ತುಪಡಿಸಿರುವ ಮಾರ್ಗಸೂಚಿಗಳು ಮತ್ತು ನಿರ್ದೇಶನಗಳನುಸಾರ ಪ್ರಸ್ತಾವನೆಯನ್ನು ಪರಿಶೀಲಿಸಿ, ಯೋಜನಾ ಶಾಖೆಯವರು ಉಲ್ಲೇಖ (5) ರನ್ವಯ ಅನುಮೋದನೆ ಪಡೆಯುವುದು ಅಲ್ಲದೇ ಅನುದಾನ ಬಿಡುಗಡೆಗೆ ಆಡಳಿತ ಅನುಮೋದನೆ ಪಡೆದು, ನಿಯಮಾನುಸಾರ ಅನುಷ್ಠಾನಾಧಿಕಾರಿಯವರಿಗೆ ಹಣ ಸಂದಾಯ ಮಾಡಲು ಕ್ರಮ ಜರುಗಿಸುವುದು.

      (ಕ್ರಮ: ಲೆಕ್ಕಶಾಖೆ, ಯೋಜನಾ ಶಾಖೆ, ಆಡಳಿತ ಶಾಖೆ)

ಮೇಲೆ ವಿವರಿಸಿರುವ ನಿರ್ದೇಶನಗಳಂತೆ, ಅನುಷ್ಠಾನಾ ಇಲಾಖೆಯವರು ಕೋರಿಕೆ ಪತ್ರದೊಂದಿಗೆ ಸಲ್ಲಿಸುವ ಆನ್‌ಲೈನ್ ಹಣ ಸ್ವೀಕೃತಿ ಪ್ರಸ್ತಾವನೆಯಯನ್ನು, ಆವಕ ವಹಿವಾಟು ವಹಿಯಲ್ಲಿ ದಾಖಲಿಸಿ, ವಿಳಂಬತೆಗೆ ಆಸ್ಪದ ನೀಡದೆ ಕ್ರಮಬದ್ಧ ರೀತಿಯಲ್ಲಿ ವ್ಯವಹರಿಸಿ, ಅನುದಾನ ಪಾವತಿಯ ವ್ಯವಸ್ಥೆಯನ್ನು ಸುಧಾರಣಗೊಳಿಸಿದೆ.

19.3.19

ಕಾರ್ಯದರ್ಶಿಗಳು,
ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ
ಮಂಡಳಿ, ಕಲಬುರಗಿ.

**ಪ್ರತಿಯನ್ನು ಅನುಪಾಲನೆಗೆ:** ಎಲ್ಲಾ ಅಧಿಕಾರಿಗಳು/ಸಿಬ್ಬಂದಿ ವರ್ಗ, ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ.